ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	15
ಮಾನ್ಯ ಸದಸ್ಯರ ಹೆಸರು	ಶ್ರೀ. ಗೋವಿಂದರಾಜು (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	13.12.2021
ಉತ್ತರಿಸುವ ಸಚಿವರು	ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ	ಸಾರ್ವಜನಿಕ ಸ್ಥಳಗಳಲ್ಲಿ ತುರ್ತು ಚಿಕತ್ಸೆಗಾಗಿ ಸರ್ಕಾರ ಯಾವ ಯಾವ ಕ್ರಮಗಳನ್ನು ಕೈಗೊಂಡಿದೆ.	ಸಾರ್ವಜನಿಕ ಸ್ಥಳಗಳಲ್ಲಿ ತುರ್ತು ಚಿಕಿತ್ಸೆ ನೀಡುವ ಉದ್ದೇಶದಿಂದ 2008-09ನೇ ಸಾಲಿನಿಂದ ತುರ್ತು ಆರೋಗ್ಯ ಸೇವೆಯನ್ನು 108-ಆರೋಗ್ಯ ಕವಚ" ಆಂಬ್ಯುಲೆನ್ಸ್‌ಗಳ ಮೂಲಕ ಒದಗಿಸಲಾಗುತ್ತಿದೆ.
ಆ	ಸಾರ್ವಜನಿಕ ಸ್ಥಳಗಳಾದ ಬಸ್ ನಿಲ್ದಾಣ, ರೈಲ್ವೇ ಸ್ಟೇಷನ್, ವಿಮಾನ ನಿಲ್ದಾಣ, ಮಾರುಕಟ್ಟೆ ಹಾಗೂ ಇನ್ನಿತರೆ ಸ್ಥಳಗಳಲ್ಲಿ ಆಕಸ್ಮಿಕವಾಗಿ ಸಾರ್ವಜನಿಕರಿಗೆ ಬರುವ ಎದೆ ನೋವಿನ ಸಂದರ್ಭದಲ್ಲಿ ಸೂಕ್ತ ಚಿಕಿತ್ಸೆ ನೀಡಲು ಯಾವ ಸಾಧನ ಮತ್ತು ವ್ಯಕ್ತಿಗಳನ್ನು ನೇಮಿಸಲಾಗಿದೆ.	108-ಆರೋಗ್ಯ ಕವಚ ಸೇವೆಯಡಿಯಲ್ಲಿ ಲಭ್ಯವಿರುವ 710 ಆಂಬ್ಯುಲೆನ್ಸ್‌ಗಳನ್ನು ರಾಜ್ಯದ ಆಯಾಕಟ್ಟಿನ ಜಾಗಗಳಲ್ಲಿ ನಿಲುಗಡೆಗೊಳಿಸಲಾಗಿದೆ. ಸದರಿ ಆಂಬ್ಯುಲೆನ್ಸ್‌ಗಳ ಪೈಕಿ 156 ALS(Advance Life Support) ಆಂಬ್ಯುಲೆನ್ಸ್‌ಗಳು ಹಾಗೂ 554 BLS(Basic Life Support) ಆಂಬ್ಯುಲೆನ್ಸ್‌ಗಳಾಗಿದ್ದು, ಅವುಗಳಿಗೆ ಸಾಮಾನ್ಯ ತುರ್ತು ಪ್ರಕರಣಗಳನ್ನು ನಿಭಾಯಿಸಲು ಅವಶ್ಯವಿರುವ ಎಲ್ಲಾ ವೈದ್ಯಕೀಯ ಉಪಕರಣಗಳನ್ನು ಅಳವಡಿಸಲಾಗಿದೆ. ಸದರಿ ಆಂಬ್ಯುಲೆನ್ಸ್‌ಗಳು ಪ್ರತಿ ದಿನ 12 ಗಂಟೆಗಳ ಪಾಳಿಯಂತೆ ಎರಡು ಪಾಳಿಗಳಲ್ಲಿ (ಶಿಫ್ಟ್) ಕಾರ್ಯನಿರ್ವಹಿಸುತ್ತಿವೆ. ಎಲ್ಲಾ BLS ಆಂಬ್ಯುಲೆನ್ಸ್‌ಗಳಲ್ಲಿ ದಿನದ 24 ಗಂಟೆಯು ತುರ್ತು ಪ್ರಕರಣಗಳನ್ನು ನಿಭಾಯಿಸುವ ಶುಶ್ರೂಷಕರು ಕರ್ತವ್ಯ ನಿರ್ವಹಿಸುತ್ತಾರೆ. ಹೃದಯ ಸಂಬಂಧಿ ಹಾಗೂ ಇತರೆ ತೀವ್ರತರಹದ ತುರ್ತು ಪ್ರಕರಣಗಳನ್ನು ನಿಭಾಯಿಸಲು ರಾಜ್ಯಾದ್ಯಾಂತ 156 ALS ಆಂಬ್ಯುಲೆನ್ಸ್‌ಗಳನ್ನು ಮುಖ್ಯವಾಗಿ ಜನನಿಬಿಡ ಸಾರ್ವಜನಿಕ ಸ್ಥಳಗಳಾದ ಬಸ್ ನಿಲ್ದಾಣ, ರೈಲ್ವೇ ಸ್ಟೇಷನ್, ವಿಮಾನ ನಿಲ್ದಾಣ, ಮಾರುಕಟ್ಟೆ ಮತ್ತು ರಾಷ್ಟ್ರೀಯ ಹೆದ್ದಾರಿಗಳು ಹಾಗೂ ಇನ್ನಿತರೆ ಮುಖ್ಯ ಸ್ಥಳಗಳಲ್ಲಿ ನಿಲುಗಡೆ ಮಾಡಲಾಗಿದೆ. ಸದರಿ ALS (Advance Life Support) ಆಂಬ್ಯುಲೆನ್ಸ್‌ಗಳಲ್ಲಿ ಟ್ರಾನ್ಸ್‌ಪೋರ್ಟ್ ವೆಂಟಿಲೇಟರ್ (ಕೃತಕ ಉಸಿರಾಟದ ಯಂತ್ರಗಳು) ಮತ್ತು ಆಟೋಮೆಟೆಡ್ ಎಕ್ಸ್‌ಟರ್ನನಲ್ ಡಿಫಿಬ್ರಿಲೇಟರ್ (ಹೃದಯ ಸ್ತಂಭನವಾದಾಗ ಎಲೆಕ್ಟ್ರಿಕ್ ಶಾಕ್ ನೀಡುವ ಯಂತ್ರ) ಅಳವಡಿಸಲಾಗಿದ್ದು ಹಾಗೂ ತರಬೇತಿ ಹೊಂದಿದ EMT (Emergency medical technician) ಗಳು ದಿನದ 24 ಗಂಟೆಯು ಕಾರ್ಯನಿರ್ವಹಿಸುತ್ತಾರೆ.
ಇ	ನಿಂತು ಹೋದ ಎದೆ ಬಡಿತವನ್ನು ಮತ್ತೆ ಆರಂಭಿಸಲು ಬಳಸುವ (ಆಟೋಮೆಟೆಡ್ ಎಕ್ಸ್‌ಟರ್ನನಲ್ ಡಿಫಿಬ್ರಿಲೇಟರ್) ಸಾಧನೆಗಳನ್ನು ಎಷ್ಟು ಸ್ಥಳಗಳಲ್ಲಿ ಅಳವಡಿಸಲಾಗಿದೆ.	ನಿಂತು ಹೋದ ಎದೆ ಬಡಿತವನ್ನು ಮತ್ತೆ ಆರಂಭಿಸಲು ಬಳಸುವ (ಆಟೋಮೆಟೆಡ್ ಎಕ್ಸ್‌ಟರ್ನನಲ್ ಡಿಫಿಬ್ರಿಲೇಟರ್) ಸಾಧನಗಳನ್ನು 108-ಆರೋಗ್ಯ ಕವಚ ಸೇವೆಯಡಿ 156 ALS ಆಂಬ್ಯುಲೆನ್ಸ್‌ಗಳಲ್ಲಿ ಅಳವಡಿಸಲಾಗಿದೆ.

ಈ	ಈ ಯಂತ್ರಗಳನ್ನು ಖರೀದಿಸಲು ಸರ್ಕಾರಕ್ಕೆ ಎಷ್ಟು ವೆಚ್ಚವಾಗುತ್ತದೆ.	2020-21ನೇ ಸಾಲಿನಲ್ಲಿ ರೂ.312.00 ಲಕ್ಷಗಳ ಅನುದಾನದಲ್ಲಿ 120 ಆಟೋಮೆಟೆಡ್ ಎಕ್ಸ್‌ಟರ್ನನಲ್ ಡಿಫಿಬ್ರಿಲೇಟರ್ ಸಾಧನಗಳನ್ನು ಖರೀದಿಸಲಾಗಿದೆ.
ಉ	ಇವುಗಳನ್ನು ಅಳವಡಿಸದಿದ್ದಲ್ಲಿ ಯಾವ ಕಾರಣಕ್ಕಾಗಿ ಅಳವಡಿಸಲಾಗಿಲ್ಲ ಎಂಬ ಮಾಹಿತಿಯನ್ನು ಒದಗಿಸುವುದು.	

ಆಕುಕ 178 ಎಸ್ ಎಂಎಂ 2021

(ಡಾ||ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು